# ಮತ್ತೆ ಮತ್ತೆ ನೆನಪಾಗುವ ಮೊಹಮ್ಮದ್ ರಫಿ

■ ಹೇಮಂತ ಕುಮಾರ ದೇಸಾಯಿ

ರಫಿ ನಮ್ಮನ್ನಗಲಿ ಮೂವತ್ತೆಂಟು ವರ್ಷಗಳೇ ಸಂದಿವೆ ( ಮರಣ : 31 ಜುಲೈ 1980) ಅವರ ಸಮಕಾಲೀನ ಗಾಯಕರಾದ ಮುಕೇಶ್, ಕಿಶೋರ್ ಕುಮಾರ್, ತಲತ್ ಮಹಮೂದ್, ಮನ್ನಾ ಡೇ ಯವರಲ್ಲಿ ಮುಕೇಶ್ ಹೊರತುಪಡಿಸಿ ಉಳಿದವರೆಲ್ಲ ರಫಿಯ ನಿಧನಾ ನಂತರ ದಶಕ ದಶಕಗಳವರೆಗೂ ತಮ್ಮ ವೃತ್ತಿಯಲ್ಲಿ ನಿರತರಾಗಿದ್ದರೂ ಶ್ರೋತೃಗಳ ತಲೆಯಿಂದ ರಫಿಯ ನಶೆ ಇಳಿಯಲಿಲ್ಲ.

ಅದೆಷ್ಟೋ ಹೊಸ ಗಾಯಕರು ಬಂದರು, ಹೋದರೂ ಕೂಡ. ಆದರೆ ಇಂದಿಗೂ ಮೊಹಮ್ಮದ್ ರಫಿಯ ಜನಪ್ರಿಯತೆ ಕುಂದಿಲ್ಲ. ಅವರ ಗಾನ ಮಾಧುರ್ಯದ ಕಂಪು ಜನಮಾನಸದಲ್ಲಿ ಮಾಸಿಲ್ಲ. ಏಕೆಂದರೆ ರಫಿಯನ್ನು ಮರೆಯಿಸಬಲ್ಲ ಮತ್ತೊಬ್ಬ ಗಾಯಕ ಹುಟ್ಟಲೇ ಇಲ್ಲ. ರಫಿಯ ನಿಧನದಿಂದ ತುಂಬಲಾಗದ ನಷ್ಟ ಎಂಬ ವ್ಯಾಖ್ಯಾನ ಅಕ್ಷರಶಃ ಸತ್ಯ.

ಡಿಸೆಂಬರ್ 24, 1924 ರಂದು ಪಂಜಾಬ್‌ನ ಅಮೃತ್‌ಸರ ಜಿಲ್ಲೆಯ ಸುಲ್ತಾನ್ ಸಿಂಗ್ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ಮೊಹಮ್ಮದ್ ರಫಿಯವರ ಜೀವಿತಾವಧಿ ತೀರಾ ಕಡಿಮೆಯೇ. 1944 ರಿಂದ 1980 ರ ವರೆಗಿನ ಅಲ್ಪಾವಧಿಯಲ್ಲಿ ಕನ್ನಡವೂ ಸೇರಿದಂತೆ 11 ಭಾರತೀಯ ಭಾಷೆಗಳಲ್ಲಿ ಸುಮಾರು 26000 ಹಾಡುಗಳ ಧ್ವನಿಮುದ್ರಿಕೆಯನ್ನು ಪೂರೈಸಿದ್ದರು ಎಂಬುದನ್ನು ನೋಡಿದರೆ ಅವರ ಸಾಧನೆಯ ಅಗಾಧತೆಯ ಅರಿವಾಗುತ್ತದೆ.

ರಫಿ ಹನ್ನೊಂದು ವರ್ಷದವರಿದ್ದಾಗ ಅವರ ತಂದೆ ಹಾಜಿ ಅಲಿ ಮೊಹಮ್ಮದ್ ಲಾಹೋರ್‌ಗೆ ವಲಸೆ ಹೋದರು. ಹೀಗಾಗಿ ಅವರ ಸಂಗೀತಾಭ್ಯಾಸ ಲಾಹೋರ್‌ನಲ್ಲಿಯೇ ಆರಂಭವಾಯಿತು. ಉಸ್ತಾದ್ ಅಬ್ದುಲ್ ವಹೀದ್ ಖಾನ್, ಪಂಡಿತ್ ಜೀವನ್ ಲಾಲ್ ಮಟ್ಟೂ, ಫಿರೋಜ್ ನಿಜಾಮಿಯವರ ಸಂಗೀತ ಗರಡಿಯಲ್ಲಿ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿದರು. ಕೇವಲ ಹದಿಮೂರು ವರ್ಷದವರಿದ್ದಾಗಲೇ ತಮ್ಮ ಪ್ರಥಮ ಸಾರ್ವಜನಿಕ ಕಾರ್ಯಕ್ರಮ ನೀಡಿದ ರಫಿ, ಮುಂದೆ 1941ರಲ್ಲಿ ಶ್ಯಾಮ್ ಸುಂದರ್ ಅವರ ಸಂಗೀತ ನಿರ್ದೇಶನದಲ್ಲಿ ಪಂಜಾಬಿ ಸಿನೆಮಾ 'ಗುಲ್ ಬಲೋಚ್'ಗೆ ಹಾಡುವುದರೊಂದಿಗೆ ಸಿನೆಮಾ ಹಿನ್ನೆಲೆ ಗಾಯನ ಲೋಕಕ್ಕೆ ಪದಾರ್ಪಣೆಗೈದರು. 1944 ರಲ್ಲಿ ಮುಂಬೈಗೆ ಬಂದು ತಮ್ಮ ಪ್ರತಿಭೆಯಿಂದ ಬಲು ಬೇಗನೇ ಗುರುತಿಸಲ್ಪಟ್ಟು ಭಾರತೀಯ ಚಲನಚಿತ್ರ ಲೋಕದಲ್ಲಿ ನೆಲೆಯೂರಿದರು.

ಆಗ ಉತ್ತುಂಗದಲ್ಲಿದ್ದ ನೌಷಾದ್ ಅಲಿ ಇವರನ್ನು ಬಹುವಾಗಿ ಮೆಚ್ಚಿ ತಮ್ಮ ಸಂಗೀತ ತಂಡದ ಖಾಯಂ ಗಾಯಕರನ್ನಾಗಿ ಮಾಡಿಕೊಂಡದ್ದು ಇವರ ವೃತ್ತಿಗೆ ಅತಿ ದೊಡ್ಡ ಮತ್ತು ನಿರ್ಣಾಯಕ ತಿರುವನ್ನು ನೀಡಿತು. ಮುಂದಿನ ದಿನಗಳಲ್ಲಿ ಸಚಿನ್ ದೇವ್ ಬರ್ಮನ್, ಶಂಕರ್–ಜೈಕಿಶನ್, ಮದನ್ ಮೋಹನ್, ಓ.ಪಿ. ನಯ್ಯರ್, ಲಕ್ಷ್ಮೀಕಾಂತ–ಪ್ಯಾರೇಲಾಲ್ ಅವರಂಥ ಎಲ್ಲ ದಿಗ್ಗಜ ಸಂಗೀತ ನಿರ್ದೇಶಕರ ಕಣ್ಮಣಿಯಾಗಿ ಕೀರ್ತಿ ಶಿಖರವನ್ನೇರಿದರು.

ರಫಿ ಕೇವಲ ಸುಮಧುರ ಕಂಠಧಾರಿ, ಅಪೂರ್ವ ಗಾಯಕ ಮಾತ್ರವಾಗಿರಲಿಲ್ಲ. ಭಾವಕ್ಕೆ ತಕ್ಕಂತೆ ಹಾಡಬಲ್ಲವರಾಗಿದ್ದರು. ತಮ್ಮ ಹಾಡಿಗೆ ನಟಿಸುವ ನಟನ ಹಾವ ಭಾವಗಳಿಗೆ ಹೊಂದುವಂತೆ ಹಾಡುವ ಜಾಣ್ಮೆ